ಆರ್ ಬಿ ಐ / 2004–05 / 479
ಉಲ್ಲೇಖ . ಸಂಖ್ಯೆ . ಸಿಒ . ಡಿಟಿ . 15 . 02.001/ ಹೆಚ್ 9844–9866/2004–05

ಮೇ 25, 2005
ಜೇಷ್ಠ 4, 1927 (ಶಕ)

ಪ್ರಧಾನ ವ್ಯವಸ್ಥಾಪಕರು

ಸರ್ಕಾರಿ ಲೆಕ್ಕ ವಿಭಾಗ
ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಸಹವರ್ತಿ ಬ್ಯಾಂಕುಗಳು
ಅಲಹಾಬಾದ್ ಬ್ಯಾಂಕ್ / ಬ್ಯಾಂಕ್ ಆಫ್ ಬರೋಡ / ಬ್ಯಾಂಕ್ ಆಫ್ ಇಂಡಿಯಾ/
ಬ್ಯಾಂಕ್ ಆಫ್ ಮಹಾರಾಷ್ಟ್ರ / ಕೆನರಾ ಬ್ಯಾಂಕ್ / ಸೆಂಟ್ರಲ್ ಬ್ಯಾಕ್ ಆಫ್ ಇಂಡಿಯಾ
ಕಾರ್ಪೊರೇಷನ್ ಬ್ಯಾಂಕ್ / ದೇನಾ ಬ್ಯಾಂಕ್ / ಇಂಡಿಯನ್ ಬ್ಯಾಂಕ್/ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ /
ಪಂಜಾಬ್ ನ್ಯಾಷನಲ್ ಬ್ಯಾಂಕ್/ ಸಿ0ಡಿಕೇಟ್ ಬ್ಯಾಂಕ್/ ಯುಕೋ ಬ್ಯಾಂಕ್/ ಯೂನಿಯನ್ ಬ್ಯಾಂಕ್ ಆಫ್
ಇಂಡಿಯಾ / ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ

ಮಾನ್ಯರೆ,

**ಸಾರ್ವಜನಿಕ ಭವಿಷ್ಯ ನಿಧಿ ಯೋಜನೆ, 1968 –ಸ್ಪಷ್ಟೀಕರಣ**

ಮೇ 13, 2005 ರಿಂದ ಪರಿಣಮಿಸುವಂತೆ ಸಾರ್ವಜನಿಕ ಭವಿಷ್ಯ ನಿಧಿ ಯೋಜನೆ, 1968 ರ ಉಪಬಂಧಗಳನ್ನು ತಿದ್ದುಪಡಿ ಮಾಡಿ ಹಣಕಾಸು ಮಂತ್ರಾಲಯವು ಹೊರಡಿಸಿದ ಭಾರತ ಸರ್ಕಾರದ ಅಧಿಸೂಚನೆ ದಿನಾಂಕ ಮೇ 13, 2005 ನ್ನು ರವಾನಿಸಲಾದ ನಮ್ಮ ಸುತ್ತೋಲೆ ಸಂಖ್ಯೆ ಸಿಒ ಡಿಟಿ 15.02.001 / ಹೆಚ್– 9593–9615/ 2004–05 ದಿನಾಂಕ ಮೇ 14, 2005 ನ್ನು ದಯವಿಟ್ಟು ನೋಡಿ.

2. ಈ ಸಂಬಂಧದಲ್ಲಿ ಭಾರತ ಸರ್ಕಾರದ ಹಣಕಾಸು ಮಂತ್ರಾಲಯವು ಪತ್ರ ಎಫ್. ಸಂಖ್ಯೆ. 2/8/2005 ಎನ್‌ಎಸ್– 11 ದಿನಾಂಕ ಮೇ 20, 2005 ರಲ್ಲಿ ಇತರ ವಿಷಯಗಳೊಂದಿಗೆ ಈ ಮುಂದಿನ ಸ್ಪಷ್ಟೀಕರಣಗಳನ್ನು ನೀಡಿದೆ.

(೧) ಬಂಡವಾಳ ಹೂಡಿಕೆಗಳ ವ್ಯಾಪ್ತಿಯನ್ನು **ವ್ಯಕ್ತಿಗಳಿಗೆ ಮಾತ್ರ** ನಿರ್ಬಂಧಿಸುವ ಸಲುವಾಗಿ ವಿವಿಧ ಸಣ್ಣ ಉಳಿತಾಯ ಯೋಜನೆಗಳಿಗೆ ತಿದ್ದುಪಡಿಗಳನ್ನು ಮಾಡಲಾಗಿದೆ. ಅದರನ್ವಯ ನ್ಯಾಯಿಕ ವ್ಯಕ್ತಿಗಳು ( ಹಿಂದು ಅವಿಭಕ್ತ ಕುಟುಂಬಗಳು, ಟ್ರಸ್ಟ್ ಗಳು , ಭವಿಷ್ಯ ನಿಧಿಗಳು ಮುಂತಾದವರು) ಅಂದರೆ ಕೇವಲ ವ್ಯಕ್ತಿಗಳಲ್ಲದವರು ( ನಿಯಮಗಳ ಪ್ರಕಾರ ಅಪ್ರಾಪ್ತ ವಯಸ್ಕರ ಮತ್ತು ಮನೋವಿಕಲರ ಪರವಾಗಿ ಪೋಷಕರು ಏಕ ಅಥವಾ ಜಂಟಿ ಖಾತೆಗಳ ಅಥವಾ ಠೇವಣಿಗಳ ಮೂಲಕ) ಭವಿಷ್ಯ ನಿಧಿ ಯೋಜನೆ, 1968 ಸೇರಿದಂತೆ ಯಾವುದೇ ಸಣ್ಣ ಉಳಿತಾಯ ಯೋಜನೆ ಅಡಿಯಲ್ಲಿ ಮೇ 13, 2005 ರಂದು ಅಥವಾ ಆ ತರುವಾಯ ತೆರೆದಿರುವ ಖಾತೆಗಳಾವುವಾದರೂ ಇದ್ದರೆ, ಅವುಗಳನ್ನು ಅನೂರ್ಜಿತ ಎಂದು ಪ್ರಾರಂಭದಲ್ಲೇ ಪರಿಗಣಿಸಿ ಅಂಥ ಖಾತೆಗಳನ್ನು ಮುಕ್ತಾಯಗೊಳಿಸಲು ಮತ್ತು ಠೇವಣಿಗಳನ್ನು ಬಡ್ಡಿಯಿಲ್ಲದೆ ಠೇವಣಿದಾರರಿಗೆ ಹಿಂದಿರುಸಗಿಸಲು ಕೂಡಲೇ ಕ್ರಮ ತೆಗೆದುಕೊಳ್ಳತಕ್ಕದ್ದು.

(೨) ಆದರೆ, ದಿನಾಂಕ ಮೇ 13, 2005 ರ ತಿದ್ದುಪಡಿಗಳಿಗೆ ಮುಂಚೆ ಚಾಲ್ತಿಯಲ್ಲಿದ್ದ ನಿಯಮಗಳ ಅನುಸಾರವಾಗಿ ತೆರೆಯಲಾದ **ಹಾಲಿ ಇರುವ ಖಾತೆಗಳಿಗೆ** ಮೇಲಿನ ತಿದ್ದುಪಡಿಗಳು **ಅನ್ವಯವಾಗುವುದಿಲ್ಲ** ಎಂಬುದನ್ನು ಗಮನಿಸತಕ್ಕದ್ದು. ಇವು ಅವಧಿ ತುಂಬುವವರೆಗೆ ಮುಂದುವರೆಯತಕ್ಕದ್ದು ಮತ್ತು ಈ ಖಾತೆಗಳಿಗೆ ಮಾಡುವ ಠೇವಣಿಗಳಿಗೆ ಮತ್ತು ಈ ಖಾತೆಗಳಿಂದ ಹಣ ತೆಗೆಯುವುದಕ್ಕೆ ಸದರಿ ನಿಯಮಗಳ ಪ್ರಕಾರ ಅವಕಾಶ ನೀಡತಕ್ಕದ್ದು.

ಆದರೆ, ಹಾಲಿ ಇರುವ ಖಾತೆಗಳ ಯಾವುದೇ ವಿಸ್ತರಣೆ ದಿನಾಂಕ ಮೇ 13, 2005 ರ ತಿದ್ದುಪಡಿಗಳಿಗೆ ಒಳಪಡತಕ್ಕದ್ದು.

3. ಮೇಲಿನ ಅಂಶದ ದೃಷ್ಟಿಯಿಂದ ನೀವು ಸಾರ್ವಜನಿಕ ಭವಿಷ್ಯ ನಿಧಿ ಯೋಜನೆ , 1968 ನ್ನು ನಿರ್ವಹಿಸುತ್ತಿರುವ ನಿಮ್ಮ ಹೆಸರಿಸಿದ ಎಲ್ಲಾ ಶಾಖೆಗಳಿಗೆ / ಕಚೇರಿಗಳಿಗೆ ದಯವಿಟ್ಟು ಸೂಕ್ತ ಸೂಚನೆಗಳನ್ನು ನೀಡುವುದು ಮತ್ತು ಅವುಗಳನ್ನು ಕಟ್ಟುನಿಟ್ಟಾಗಿ ಎಲ್ಲಾ ಪಾಲಿಸುವಂತೆ ನೋಡಿಕೊಳ್ಳತಕ್ಕದ್ದು.

ದಯವಿಟ್ಟು ಸ್ವೀಕೃತಿ ನೀಡಿ.

**ತಮ್ಮ ವಿಶ್ವಾಸಿ,**
**(ಡಿ. ರಾಜಗೋಪಾಲರಾವ್)**
**ಉಪ ಪ್ರಧಾನ ವ್ಯವಸ್ಥಾಪಕರು**